# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **13** |
| ಸದಸ್ಯರ ಹೆಸರು | : | **ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)** |
| ಉತ್ತರಿಸುವ ದಿನಾಂಕ | : | **04.03.2025** |
| ಉತ್ತರಿಸುವ ಸಚಿವರು | : | **ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.** |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆ ಇಲಾಖೆಯಿಂದ ಕಳೆದ 03 ವರ್ಷಗಳಿಂದ ಸ್ಥಾಪಿಸಿದ ಕೈಗಾರಿಕೆಗಳ ಸಂಖ್ಯೆ ಎಷ್ಟು; ಯಾವ ಯಾವ ಭಾಗದಲ್ಲಿ ಸ್ಥಾಪಿಸಲಾಗಿದೆ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸ್ಥಾಪನೆಯಾಗಿ ಉದ್ಯಮ್ ಪೋರ್ಟಲ್‌ನಲ್ಲಿ ನೋಂದಾಯಿತಗೊಂಡ MSME ಘಟಕಗಳ ವಿವರಗಳನ್ನು **ಅನುಬಂಧ 1, 2 & 3 ರಲ್ಲಿ** ಒದಗಿಸಿದೆ.<br>2021-22 - 3089<br>2022-23 - 1650<br>2023-24 - 1761 |
| (ಆ) | ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ ವಿಶೇಷ ಕೈಗಾರಿಕೆ ವಲಯ ಸ್ಥಾಪಿಸಲು ಇಲಾಖೆ ಮುಂದೆ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು) | ನೂತನ ಕೈಗಾರಿಕಾ ನೀತಿ 2025-30 ರಲ್ಲಿ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳನ್ನು ವಲಯ-1ರಲ್ಲಿ ವರ್ಗೀಕರಿಸಿದ್ದು ಕೈಗಾರಿಕಾಭಿವೃದ್ಧಿಗೆ ಹೆಚ್ಚಿನ ಉತ್ತೇಜನ ಹಾಗೂ ರಿಯಾಯಿತಿಗಳು ಲಭ್ಯವಿರುತ್ತದೆ. |
| (ಇ) | ಸಣ್ಣ ಕೈಗಾರಿಕೆ ಪ್ರಾರಂಭಿಸಲು ಇಲಾಖೆ ಹೊಂದಿರುವ ನೀತಿಗಳೇನು; ಪ್ರೋತ್ಸಾಹ ನೀಡಲು ಇಲಾಖೆ ತಂದಿರುವ ಯೋಜನೆಗಳಾವುವು; (ವಿವರ ನೀಡುವುದು) | ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ಹೊಸದಾಗಿ ಕೈಗಾರಿಕಾ ನೀತಿ 2025-30ನ್ನು ಜಾರಿಗೆ ತಂದು, ಅದರಡಿ ಕೆಳಕಂಡ ರಿಯಾಯಿತಿ ಮತ್ತು ಪ್ರೋತ್ಸಾಹನೆಗಳನ್ನು ನೀಡಲಾಗುತ್ತಿದೆ:<br>1) ಮುದ್ರಾಂಕ ಶುಲ್ಕ ವಿನಾಯಿತಿ<br>2) ನೋಂದಣಿ ಶುಲ್ಕ ರಿಯಾಯಿತಿ<br>3) ಬಂಡವಾಳ ಹೂಡಿಕೆ ಸಹಾಯಧನ<br>4) ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5) ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>6) ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.<br>7) ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>8) ವಿದ್ಯುತ್ ತೆರಿಗೆ ವಿನಾಯಿತಿ<br>9) ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>10) ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ<br>11) ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ<br>12) ಸಣ್ಣ ಕೈಗಾರಿಕೆ ಸ್ಥಾಪಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಸರ್ಕಾರದ ಹೊಸ ಕೈಗಾರಿಕಾ ನೀತಿ 2020-2025 ರಂತೆ ಮಳಿಗೆ / ನಿವೇಶನಗಳ ಹಂಚಿಕೆಯಲ್ಲಿ ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡ ಹಂಚಿಕೆ ದಾರರಿಗೆ ಶೇ.24.10 ರಷ್ಟು |

| | | |
|---|---|---|
| | | ಮೀಸಲಾತಿಯನ್ನು ಅನುಸರಿಸಲಾಗುತ್ತಿದೆ.<br>13) ಸಣ್ಣ ಕೈಗಾರಿಕೆ ಸ್ಥಾಪಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಹಂಚಿಕೆಯಾದ ನಿವೇಶನ ಬೆಲೆಯ ಶೇ.75 ರಷ್ಟು ಸಹಾಯಧನ / ರಿಯಾಯಿತಿಯನ್ನು ಸರ್ಕಾರದ ಅನುದಾನದಲ್ಲಿ ವಿಸ್ತರಿಸಲಾಗುತ್ತಿದೆ ಹಾಗೂ ಸರ್ಕಾರದ ಎಸ್.ಸಿ.ಪಿ / ಟಿ.ಎಸ್.ಪಿ. ಯೋಜನೆಯ ಅನುದಾನದಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಹಂಚಿಕೆ ಮಾಡಿ, ಮಳಿಗೆಯ ನಿವೇಶನದ ಬೆಲೆಯ ಶೇ.75 ರಷ್ಟು ಹಾಗೂ ಮಳಿಗೆ ನಿರ್ಮಾಣದ ವೆಚ್ಚಕ್ಕೆ ಶೇ.90 ರಷ್ಟು ಸಹಾಯಧನ / ರಿಯಾಯಿತಿಯನ್ನು ನೀಡಲಾಗುತ್ತಿದೆ.<br>14) ಕೆ.ಎಸ್.ಎಸ್.ಡಿ.ಸಿ. ಸಂಸ್ಥೆಯು ಅಭಿವೃದ್ಧಿ ಪಡಿಸುವ ಕೈಗಾರಿಕಾ ವಸಾಹತುಗಳಲ್ಲಿ ಅಲ್ಪ ಸಂಖ್ಯಾತ, ಹಿಂದುಳಿದ ವರ್ಗ (ವರ್ಗ-1 ಮತ್ತುವರ್ಗ-2ಎ) ವಿಕಲಚೇತನ ಉದ್ದಿಮೆದಾರರಿಗೆ ಕನಿಷ್ಟ ಶೇ.10 ರಷ್ಟು ನಿವೇಶನ / ಶೆಡ್‌ಗಳನ್ನು ಮೀಸಲಿಡಲಾಗುತ್ತಿದೆ. |
| (ಈ) | ಬೀಡಿ ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದು, ಈಗ ಪುನರ್ ವಸತಿ ಕಲ್ಪಿಸಲು ಇಲಾಖೆ ಮುಂದೆ ಪ್ರಸ್ತಾವನೆ ಇದೆಯೇ? (ವಿವರ ನೀಡುವುದು) | ಬೀಡಿ ಕಾರ್ಮಿಕರಿಗೆ ಪುನರ್ ಉದ್ಯೋಗ ಕಲ್ಪಿಸಲು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ ಎಂದು ಕಾರ್ಮಿಕ ಇಲಾಖೆಯು ತಿಳಿಸಿರುತ್ತದೆ. |

**ಸಿಐ 18 ಎಸ್‌ಎಸ್‌ಐ 2025**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಅನುಬಂಧ -1

## ದಕ್ಷಿಣ ಕನ್ನಡ ಜಿಲ್ಲೆ - ಸ್ಥಾಪನೆಯಾದ ಘಟಕಗಳು

**2021-22**

| ಕ್ರಮ ಸಂಖ್ಯೆ | ತಾಲೂಕು | ಘಟಕಗಳ ಸಂಖ್ಯೆ | ಉದ್ಯೋಗಾವಕಾಶ |
|---|---|---|---|
| 1 | ಬಂಟ್ವಾಳ | 456 | 2038 |
| 2 | ಬೆಳ್ತಂಗಡಿ | 282 | 1859 |
| 3 | ಕಡಬ | 237 | 1150 |
| 4 | ಮಂಗಳೂರು | 705 | 3424 |
| 5 | ಮೂಡುಬಿದ್ರಿ | 265 | 1095 |
| 6 | ಮುಲ್ಕಿ | 109 | 1079 |
| 7 | ಪುತ್ತೂರು | 462 | 2124 |
| 8 | ಸುಳ್ಯ | 336 | 1502 |
| 9 | ಉಳ್ಳಾಲ | 237 | 938 |
| | **ಒಟ್ಟು** | **3089** | **15209** |

## ಅನುಬಂಧ - 2

# ದಕ್ಷಿಣ ಕನ್ನಡ ಜಿಲ್ಲೆ - ಸ್ಥಾಪನೆಯಾದ ಘಟಕಗಳು

## 2022-23

| ಕ್ರಮ ಸಂಖ್ಯೆ | ತಾಲೂಕು | ಘಟಕಗಳ ಸಂಖ್ಯೆ | ಉದ್ಯೋಗಾವಕಾಶ |
|---|---|---|---|
| 1 | ಬಂಟ್ವಾಳ | 401 | 1657 |
| 2 | ಬೆಳ್ತಂಗಡಿ | 140 | 587 |
| 3 | ಕಡಬ | 73 | 237 |
| 4 | ಮಂಗಳೂರು | 537 | 2976 |
| 5 | ಮೂಡುಬಿದ್ರಿ | 130 | 392 |
| 6 | ಮುಲ್ಕಿ | 74 | 229 |
| 7 | ಪುತ್ತೂರು | 149 | 727 |
| 8 | ಸುಳ್ಯ | 57 | 211 |
| 9 | ಉಳ್ಳಾಲ | 89 | 371 |
| | **ಒಟ್ಟು** | **1650** | **7387** |

Raghav

# ಅನುಬಂಧ - 3

## ದಕ್ಷಿಣ ಕನ್ನಡ ಜಿಲ್ಲೆ - ಸ್ಥಾಪನೆಯಾದ ಘಟಕಗಳು

**2023-24**

| ಕ್ರಮ ಸಂಖ್ಯೆ | ತಾಲೂಕು | ಘಟಕಗಳ ಸಂಖ್ಯೆ | ಉದ್ಯೋಗಾವಕಾಶ |
|---|---|---|---|
| 1 | ಬಂಟ್ವಾಳ | 383 | 1516 |
| 2 | ಬೆಳ್ತಂಗಡಿ | 135 | 651 |
| 3 | ಕಡಬ | 80 | 314 |
| 4 | ಮಂಗಳೂರು | 703 | 3149 |
| 5 | ಮೂಡುಬಿದ್ರಿ | 72 | 305 |
| 6 | ಮುಲ್ಕಿ | 71 | 338 |
| 7 | ಪುತ್ತೂರು | 129 | 553 |
| 8 | ಸುಳ್ಯ | 87 | 360 |
| 9 | ಉಳ್ಳಾಲ | 101 | 467 |
| | **ಒಟ್ಟು** | **1761** | **7653** |